2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ಚಿಕ್ಕಮಗಳೂರು

<u>ಸತ್ರ ಮೊಕದ್ದಮೆ ನಂಃ 118/2016</u>

| | | | |
|---|---|---|---|
| ಸಾಕ್ಷಿದಾರರ ಹೆಸರು | - ಕೆ.ಕೃಷ್ಣಮೂರ್ತಿ | | ಪಿಡಬ್ಲೂ - 19 |
| ತಂದೆಯ ಹೆಸರು | - ಕರಿಯಪ್ಪ | | ಸಿಡಬ್ಲೂ - 30 |
| ವಯಸ್ಸು | - 55 ವರ್ಷ | | |
| ಉದ್ಯೋಗ | - ಪೋಲೀಸ್ ಉಪಾಧೀಕ್ಷಕರು, ಸೈಬರ್ ಕ್ರೈಂ ಪೋಲೀಸ್ ಠಾಣೆ, ಶಿವಮೊಗ್ಗ | | |
| ವಾಸ ಸ್ಥಳ | - ಶಿವಮೊಗ್ಗ | | |

ದಿನಾಂಕಃ **11.12.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-</u>

1. ನಾನು 2015 ರಿಂದ 2016 ರವರೆಗೆ ನ.ರಾ.ಪುರದಲ್ಲಿ ವೃತ್ತ ನೀರಿಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿಃ 02.11.2015 ರಂದು ಈ ಪ್ರಕರಣದ ಕಡತವನ್ನು ಮುಂದಿನ ತನಿಖೆಯ ಕುರಿತು ಚಾಸಾ.29 ರವರಿಂದ ಪಡೆದುಕೊಂಡು ಅಲ್ಲಿಯವರೆಗೆ ಆದ ತನಿಖೆಯನ್ನು ಪರಿಶೀಲಿಸಿರುತ್ತೇನೆ.

3. ಅದೇ ದಿನ ಕೃತ್ಯ ಸ್ಥಳವಾದ ಬಾಳೆಗ್ರಾಮದ ಮತ್ತಿಮರದಲ್ಲಿರುವ ಪಿರ್ಯಾದಿಯ ಮನೆಗೆ ಬೇಟಿ ನೀಡಿ ಸ್ಥಳವನ್ನು ಪರಿಶೀಲನೆ ಮಾಡಿರುತ್ತೇನೆ. ನಂತರ ಸ್ಥಳದಲ್ಲಿ ಹಾಜರಿದ್ದ ಚಾಸಾ.1 ರವರಿಗೆ ಕೃತ್ಯ ನಡೆದ ಸಮಯದಲ್ಲಿ ಅವರು ತೊಟ್ಟಿದ್ದ ಬಟ್ಟೆಗಳನ್ನು ಹಾಜರುಪಡಿಸುವಂತೆ ಹೇಳಿದ ಪ್ರಕಾರ ಚಾಸಾ.1 ರವರು ಅದೇ ದಿನ ಸಂಜೆ ನಮ್ಮ ವೃತ್ತ ಕಚೇರಿಗೆ ಭೇಟಿ ನೀಡಿ, ಚಾಸಾ.10 ಮತ್ತು 11 ರವರ ಸಮಕ್ಷಮ 1)ಒಂದು ಅರ್ಧ ತೋಳಿನ ಕಡು ಹಸಿರು ಮತ್ತು ಬಿಳಿ ಬಣ್ಣದ ಚೌಕಳಿ ಇರುವ ಶರಟು, 2) ಒಂದು ಕೇಸರಿ ಬಣ್ಣದ ಪಂಚೆ ಅಲ್ಲಲ್ಲಿ ರಕ್ತದ ಕಲೆಗಳಿತ್ತು, 3)ಕೃತ್ಯ

ನಡೆಯುವ ಸಮಯದಲ್ಲಿ ಕಾಲಿಗೆ ಕಟ್ಟಿದ್ದ ಒಂದು ಸಣ್ಣ ಕೆಂಪು ಚುಕ್ಕೆ ಇರುವ ಬಿಳಿ ಬಣ್ಣದ ಚೂಡಿದಾರ್ ಪ್ಯಾಂಟ್ ಇದರಲ್ಲಿ ಅಲ್ಲಲ್ಲಿ ರಕ್ತದ ಕಲೆಗಳಿತ್ತು. ಇವುಗಳನ್ನು ನನ್ನ ಸಮಕ್ಷಮ ಹಾಜರುಪಡಿಸಿದ್ದು ನಾನು ಅವುಗಳನ್ನು ಪಂಚರ ಸಮಕ್ಷಮ ಅಮಾನತುಪಡಿಸಿಕೊಂಡು ಅವುಗಳನ್ನು ಬಿಳಿ ಬಟ್ಟೆ ಯಿಂದ ಸುತ್ತಿ ಆರ್ ಎನ್ನುವ ಅಕ್ಷರ ಇರುವ ಮೊಹರಿನಿಂದ ಸೀಲು ಮಾಡಿ ಮಾಲುಪಟ್ಟಿಗೆ ಅಳವಡಿಸಿರುತ್ತೇನೆ. ಈ ಬಗ್ಗೆ ನಾನು ಸಂಜೆ 5.30 ರಿಂದ 6.15 ರವರೆಗೆ ಅಮಾನತು ಪಂಚನಾಮೆಯನ್ನು ತಯಾರಿಸಿರುತ್ತೇನೆ. ನಾನು ತಯಾರಿಸಿದ ಅಮಾನತು ಪಂಚನಾಮೆಯನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.4 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ.4(ಸಿ) ಎಂದು ಗುರುತಿಸಲಾಯಿತು. ಮಾಲುಪಟ್ಟಿಯನ್ನು ನೋಡುತ್ತಿದ್ದು ಅದನ್ನು ನಿಪಿ.45 ಎಂದು, ಸಾಕ್ಷಿಯ ಸಹಿಯನ್ನು ನಿಪಿ.45(ಎ) ಎಂದು ಗುರುತಿಸಲಾಯಿತು.

4. ನಾನು ವಶಪಡಿಸಿಕೊಂಡ ವಸ್ತುಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ಗುರುತಿಸಿರುವ ಒಂದು ಅರ್ಧ ತೋಳಿನ ಕಡು ಹಸಿರು ಮತ್ತು ಬಿಳಿ ಬಣ್ಣದ ಚೌಕಳಿ ಇರುವ ಶರಟನ್ನು ಈಗಾಗಲೇ ಮು.ಮಾ.2 ಎಂದು ಗುರುತಿಸಲಾಗಿದ್ದು, ಮು.ಮಾ.2 ರ ಮೇಲೆ ಅಂಟಿಸಿರುವ ಚೀಟಿಯ ಮೇಲೆ ಇರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮು.ಮಾ.2(ಎ) ಎಂದು ಗುರುತಿಸಲಾಯಿತು.

5. ಸಾಕ್ಷಿ ಗುರುತಿಸಿರುವ ಒಂದು ಕೇಸರಿ ಬಣ್ಣದ ಪಂಚೆಯನ್ನು ಈಗಾಗಲೇ ಮು.ಮಾ.3 ಎಂದು ಗುರುತಿಸಲಾಗಿದ್ದು, ಮು.ಮಾ.3 ರ ಮೇಲೆ ಅಂಟಿಸಿರುವ ಚೀಟಿಯ ಮೇಲೆ ಇರುವ ಸಹಿಯನ್ನು ಸಾಕ್ಷಿ

ನೋಡಿ ಗುರುತಿಸಿದ್ದು ಅದನ್ನು ಮು.ಮಾ.3(ಎ) ಎಂದು ಗುರುತಿಸಲಾಯಿತು.

6. ಸಾಕ್ಷಿ ಗುರುತಿಸಿರುವ ಒಂದು ಕೆಂಪು ಚುಕ್ಕೆ ಇರುವ ಬಿಳಿ ಬಣ್ಣದ ಚೂಡಿದಾರ್ ಪ್ಯಾಂಟನ್ನು ಈಗಾಗಲೇ ಮು.ಮಾ.4 ಎಂದು ಗುರುತಿಸಲಾಗಿದ್ದು, ಮು.ಮಾ.4 ರ ಮೇಲೆ ಅಂಟಿಸಿರುವ ಚೀಟಿಯ ಮೇಲೆ ಇರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮು.ಮಾ.4(ಎ) ಎಂದು ಗುರುತಿಸಲಾಯಿತು.

7. ಅದೇ ದಿನ ಸಾಕ್ಷಿದಾರರಾದ ಚಾಸಾ.2, 4 ರಿಂದ 9, ರವರ ಹೇಳಿಕೆ ಪಡೆದಿರುತ್ತೇನೆ. ಚಾಸಾ.7 ರವರು ನನ್ನ ಸಮಕ್ಷಮ ನಿಪಿ.12 ರಂತೆ ಹೇಳಿಕೆ ನೀಡಿರುತ್ತಾರೆ. ಚಾಸಾ.8 ರವರು ನನ್ನ ಸಮಕ್ಷಮ ನಿಪಿ.14 ರಂತೆ ಹೇಳಿಕೆ ನೀಡಿರುತ್ತಾರೆ.

8. ದಿಃ 09.11.2015 ರಂದು ಈ ಪ್ರಕರಣದ ತನಿಖೆಯನ್ನು ಮುಂದುವರೆಸಿ ಚಾಸಾ.26 ರವರು ದಿಃ 08.11.2015 ರಂದು ಇ ಮೇಲ್ ಮುಖಾಂತರ ನಮ್ಮ ವೃತ್ತ ಕಚೇರಿಗೆ ಒಂದು ಮಾಹಿತಿ ಕಳುಹಿಸಿದ್ದು, ಸದರಿ ಮಾಹಿತಿಯ ಸಾರಾಂಶವೇನೆಂದರೆ ಹೊನ್ನಾಳಿ ಪೋಲೀಸ್ ಠಾಣಾ ಮೊಕದ್ದಮೆ ಸಂಖ್ಯೆ.278/2015 ಕಲಂ.392, 448 ಐಪಿಸಿ ಯ ತನಿಖಾ ಕಾಲದಲ್ಲಿ ಆರೋಪಿತರಾದ ಈ ಪ್ರಕರಣದ 1 ರಿಂದ 5 ನೇ ಆರೋಪಿತರನ್ನು ದಿಃ 07.11.2015 ರಂದು ದಸ್ತಗಿರಿ ಮಾಡಿದ್ದು ಆರೋಪಿತರು ವಿಚಾರಣಾ ವೇಳೆಯಲ್ಲಿ ದಿಃ 22.10.2015 ರಂದು ರಾತ್ರಿ ಹೊನ್ನಾಳಿ ತಾಲ್ಲೂಕು ಸಾಸಿವೆ ಹಳ್ಳಿ ಗ್ರಾಮದ ಹೊರವಲಯದ ತೋಟದ ಮನೆ ಒಂದಕ್ಕೆ ನುಗ್ಗಿ ಮನೆಯಲ್ಲಿದ್ದವರಿಗೆ ಹೆದರಿಸಿ ಎರಡು ಬಂಗಾರದ ಬಳೆ, ಬಂಗಾರದ ಸರ, ಮೊಬೈಲ್, ವಾಚುಗಳು ಮತ್ತು ಉಂಗುರವನ್ನು ದೋಚಿರುವುದಾಗಿಯೂ ಹಾಗೂ ದಿಃ 28.10.2015 ರಂದು ರಾತ್ರಿ

ನ.ರಾ.ಪುರ ತಾಲ್ಲೂಕು ಮತ್ತಿಮರ ಬಾಳೆಗ್ರಾಮದ ತೋಟಒಂದರ ಮನೆಗೆ ನುಗ್ಗಿ ಮನೆಯಲ್ಲಿದ್ದ ಒಬ್ಬ ಅಸಾಮಿಗೆ ಲಾಂಗ್ ನಿಂದ ಹೊಡೆದು ಹಲ್ಲೆ ಮಾಡಿ ಗಾಯಗೊಳಿಸಿ ಮನೆಯಲ್ಲಿದ್ದ ಒಂದು ಟಿವಿ, ಒಂದು ಕಂಪ್ಯೂಟರ್ ಸೆಟ್, ಎರಡು ವಿದ್ಯುತ್ ಇಂಡಕ್ಷನ್ ಒಲೆಗಳು, ಒಂದು ಮೊಬೈಲ್, ಒಂದು ಚಾರ್ಜರ್ ಲೈಟ್ ವಸ್ತುಗಳನ್ನು ದೋಚಿರುತ್ತಾರೆ ಎಂದು ತಿಳಿಸಿ ಹೇಳಿಕೆ ನೀಡಿದ್ದು ಅದರಂತೆ ಹೊನ್ನಾಳಿ ಪೋಲೀಸ್ ಠಾಣೆಯ ಪೋಲೀಸರು ನ.ರಾ.ಪುರ ಪೋಲೀಸ್ ಠಾಣೆಯ ಪ್ರಕರಣದಲ್ಲಿ ದರೋಡೆ ಮಾಡಿದ ವಸ್ತುಗಳಾದ ಒಂದು ಟಿವಿ ಮತ್ತು ಒಂದು ಎಮರ್ಜೆನ್ಸಿ ಲೈಟನ್ನು ಹಾಗೂ ಎರಡು ವಿದ್ಯುತ್ ಇಂಡಕ್ಷನ್ ಸ್ಟವ್ ಗಳನ್ನು ಮತ್ತು ಒಂದು ಕಂಪ್ಯೂಟರ್ ಸೆಟ್ಟನ್ನು ವಶಕ್ಕೆ ಪಡೆದುಕೊಂಡು ಹೊನ್ನಾಳಿ ಪೋಲೀಸ್ ಠಾಣೆಯ ಪಿ.ಎಫ್. ನಂ.178/2015 ರಲ್ಲಿ ನೋಂದಾಯಿಸಿ ಸಂಬಂಧಪಟ್ಟ ನ್ಯಾಯಾಲಯದ ಅನುಮತಿ ಕೋರಿರುತ್ತಾರೆ ಮತ್ತು ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ, ಅವರು ನ್ಯಾಯಾಂಗ ಬಂಧನದಲ್ಲಿ ಇರುತ್ತಾರೆ ಎಂದು ಮಾಹಿತಿ ನೀಡಿದ ಮೇರೆಗೆ ನಮ್ಮ ಠಾಣೆಯ ತನಿಖಾ ಸಂಬಂಧ ಮೇಲ್ಕಂಡ ಆರೋಪಿಗಳನ್ನು ಈ ಪ್ರಕರಣದಲ್ಲಿ ಅಳವಡಿಸಿಕೊಳ್ಳಲು ಹಾಗೂ ತನಿಖೆಯ ಸಂಬಂಧ ಪೋಲೀಸ್ ಅಭಿರಕ್ಷೆಗೆ ಪಡೆಯುವ ಸಲುವಾಗಿ ಬಾಡಿ ವಾರೆಂಟ್ ಹೊರಡಿಸಲು ಕೋಡಿ ನ.ರಾ.ಪುರ ನ್ಯಾಯಾಲಯಕ್ಕೆ ಮನವಿ ಸಲ್ಲಿಸಿರುತ್ತೇನೆ. ಮಾನ್ಯ ನ್ಯಾಯಾಲಯವು ಆರೋಪಿತರ ವಿರುದ್ಧ ಬಾಡಿ ವಾರೆಂಟನ್ನು ಹೊರಡಿಸಿ ದಿಃ 16.11.2015 ರಂದು ನ್ಯಾಯಾಲಯಕ್ಕೆ ಹಾಜರುಪಡಿಸಲು ಆದೇಶಿಸಿರುತ್ತದೆ.

9. ಅದೇ ದಿನ ಪಿರ್ಯಾದಿಯ ಮರು ಹೇಳಿಕೆಯನ್ನು ಪಡೆದಿರುತ್ತೇನೆ.

10. ದಿಃ 11.11.2015 ರಂದು ಈ ಪ್ರಕರಣದ ತನಿಖೆಯನ್ನು ಮುಂದುವರೆಸಿ ನ್ಯಾಯಾಲಯವು ನೀಡಿದ ಬಾಡಿ ವಾರೆಂಟನ್ನು ದಾವಣಗೆರೆಯ ಜಿಲ್ಲಾ ಕಾರಾಗೃಹಕ್ಕೆ ಕೊಟ್ಟು ಬರಲು ಪಿಸಿ 423 ರವರನ್ನು ನೇಮಕ ಮಾಡಿ ಕೊಟ್ಟು ಕಳುಹಿಸಿರುತ್ತೇನೆ. ಸದರಿಯವರು ಬಾಡಿ ವಾರೆಂಟನ್ನು ನೀಡಿ ವಾಪಸ್ಸು ಬಂದು ವರದಿ ಮಾಡಿರುತ್ತಾರೆ.

11. ದಿಃ 15.11.2015 ರಂದು ಈ ಪ್ರಕರಣದ ತನಿಖೆಯನ್ನು ಮುಂದುವರೆಸಿ ಈ ಪ್ರಕರಣದ 1 ರಿಂದ 5 ನೇ ಆರೋಪಿತರನ್ನು ದಿಃ 16.11.2015 ರಂದು ನ್ಯಾಯಾಲಯಕ್ಕೆ ಹಾಜರುಪಡಿಸ ಬೇಕಾಗಿದ್ದರಿಂದ ನ.ರಾ.ಪುರ ಠಾಣೆಯ ಸಿಬ್ಬಂದಿಗಳನ್ನು ನೇಮಿಸಿ ದಾವಣಗೆರೆಯ ಜಿಲ್ಲಾ ಕಾರಾಗೃಹದಿಂದ ಆರೋಪಿತರನ್ನು ತಂದು ಹಾಜರುಪಡಿಸುವಂತೆ ಸೂಚನೆ ನೀಡಿ ಕಳುಹಿಸಿಕೊಟ್ಟಿರುತ್ತೇನೆ.

12. ಅದೇ ದಿನ ದಾವಣಗೆರೆಯ ಜಿಲ್ಲಾ ಕಾರಾಗೃಹಕ್ಕೆ ಹೋಗಿ ಸದರಿ ಆರೋಪಿತರನ್ನು ಕರೆದುಕೊಂಡು ಬಂದು ನ.ರಾ.ಪುರ ಕಾರಾಗೃಹದಲ್ಲಿ ಇಟ್ಟು ಬಂದಿರುವುದಾಗಿ ನ.ರಾ.ಪುರ ಠಾಣೆಯ ಸಿಬ್ಬಂದಿಗಳು ವರದಿ ಮಾಡಿರುತ್ತಾರೆ.

13. ದಿಃ 16.11.2015 ರಂದು ಈ ಪ್ರಕರಣದ ತನಿಖೆಯನ್ನು ಮುಂದುವರೆಸಿ ನ.ರಾ.ಪುರ ಕಾರಾಗೃಹದಲ್ಲಿದ್ದ ಆರೋಪಿಗಳನ್ನು ಸಿಬ್ಬಂದಿಗಳ ಬೆಂಗಾವಲಿನಲ್ಲಿ ಆರೋಪಿತರ ಗುರುತಿಸುವಿಕೆ ಯನ್ನು ಮರೆಮಾಚಲು ಅವರುಗಳ ಮುಖಕ್ಕೆ ಕಪ್ಪು ಬಟ್ಟೆಯನ್ನು ಸುತ್ತಿ ನ್ಯಾಯಾಲಯಕ್ಕೆ ಹಾಜರುಪಡಿಸಿ, ತನಿಖೆಯ ಕುರಿತು ಪೋಲೀಸ್ ಅಭಿರಕ್ಷೆ ಕೋರಿ ಮನವಿ ಸಲ್ಲಿಸಿರುತ್ತೇನೆ.

14. ಸದರಿ ನ್ಯಾಯಾಲಯವು ದಿಃ 16.11.2015 ರಿಂದ ದಿಃ 18.11.2015 ರವರೆಗೆ 1 ರಿಂದ 5 ನೇ ಆರೋಪಿತರನ್ನು

ಪೋಲೀಸ್ ಅಭಿರಕ್ಷೆಗೆ ಆದೇಶಿಸಿದ್ದು, ನಂತರ ಸದರಿ ಆರೋಪಿತರನ್ನು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ, ನಂತರ ಸದರಿ ಆರೋಪಿತರನ್ನು ಕಚೇರಿಗೆ ಕರೆದುಕೊಂಡು ಬಂದು ಅವರ ಸ್ವಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

15. ದಿಃ 17.11.2015 ರಂದು ಸದರಿ ಸ್ವಇಚ್ಛಾ ಹೇಳಿಕೆಗಳ ಮೇರೆಗೆ ಪಂಚರಾದ ಚಾಸಾ.12 ಮತ್ತು 13 ರವರ ಸಮಕ್ಷಮ 1 ರಿಂದ 5 ನೇ ಆರೋಪಿತರು ತೋರಿಸಿದ ಕೃತ್ಯ ಸ್ಥಳವಾದ ಚಾಸಾ.1 ರವರ ಮನೆಯಲ್ಲಿ ಮಧ್ಯಾಹ್ನ 1.00 ರಿಂದ 2.00 ಗಂಟೆಯವರೆ ಮಹಜರು ಕ್ರಮ ಜರುಗಿಸಿರುತ್ತೇನೆ. ಸದರಿ ಮಹಜರಿಗೆ 1 ರಿಂದ 5 ನೇ ಆರೋಪಿತರು ನನ್ನ ಮತ್ತು ಪಂಚರ ಸಮಕ್ಷಮ ಸಹಿ ಮಾಡಿರುತ್ತಾರೆ.

16. ನಾನು ತಯಾರಿಸಿದ ಪಂಚನಾಮೆಯನ್ನು ನೋಡಿದರೆ ಗುರುತಿಸಬಲ್ಲೆ, ಸಾಕ್ಷಿಯು ಗುರುತಿಸಿರುವ ಪಂಚನಾಮೆಯನ್ನು ಈಗಾಗಲೇ ನಿಪಿ.17 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ.17(ಬಿ) ಎಂದು ಗುರುತಿಸಲಾಯಿತು. ನಿಪಿ.17 ರ ಮೇಲಿರುವ 1 ರಿಂದ 5 ನೇ ಆರೋಪಿತರ ಸಹಿಗಳನ್ನು ನೋಡುತ್ತಿದ್ದು ಅವುಗಳನ್ನು ನಿಪಿ.17(ಸಿ) ಯಿಂದ 17(ಜಿ) ಎಂದು ಗುರುತಿಸಲಾಯಿತು.

17. ದಿಃ 16.11.2015 ರಂದು ಮಾನ್ಯ ನ್ಯಾಯಾಲಯಕ್ಕೆ ಮನವಿಯನ್ನು ಸಲ್ಲಿಸಿ ಗುರುತು ಹಚ್ಚುವ ಪೇರೆಡ್ ನಡೆಸಲು ಅನುಮತಿ ಕೋರಿರುತ್ತೇನೆ.

18. ದಿಃ 17.11.2015 ರಂದು ನ್ಯಾಯಾಲಯದ ಆದೇಶದಂತೆ ನಮ್ಮ ವಶದಲ್ಲಿದ್ದ 1 ರಿಂದ 5 ನೇ ಆರೋಪಿತರನ್ನು ನ.ರಾ.ಪುರ ಕಾರಾಗೃಹಕ್ಕೆ ಸೂಕ್ತ ಬೆಂಗಾವಲಿನಲ್ಲಿ ಗುರುತು ಹಚ್ಚುವ ಪೇರೆಡ್

ನಡೆಸಲು ಕಳುಹಿಸಿಕೊಟ್ಟಿರುತ್ತೇನೆ. ಅದೇ ದಿನ ಬೆಳಿಗ್ಗೆ 10.00 ರಿಂದ 12.00 ಗಂಟೆವರೆಗೆ ನ.ರಾ.ಪುರ ತಹಸಿಲ್ದಾರರವರು ಗುರುತು ಹಚ್ಚುವ ಪೇರೆಡ್ ನಡೆಸಿರುತ್ತಾರೆ.

19. ನಂತರ ಸಾಕ್ಷಿದಾರರಾದ ಚಾಸ.1, 2, 4 ರಿಂದ 8, 9 ರವರ ಮುಂದುವರೆದ ಹೇಳಿಕೆಯನ್ನು ಪಡೆದಿರುತ್ತೇನೆ. ಚಾಸಾ.7 ರವರು ನನ್ನ ಸಮಕ್ಷಮ ನಿಪಿ.13 ರಂತೆ ಮುಂದುವರೆದ ಹೇಳಿಕೆಯನ್ನು ನೀಡಿರುತ್ತಾರೆ. ಚಾಸಾ.8 ರವರು ನನ್ನ ಸಮಕ್ಷಮ ನಿಪಿ.15 ರಂತೆ ಮುಂದುವರೆದ ಹೇಳಿಕೆಯನ್ನು ನೀಡಿರುತ್ತಾರೆ.

20. ಆರೋಪಿತರು ತನಿಖೆಗೆ ಅವಶ್ಯಕ ಇಲ್ಲದೇ ಇದ್ದುದರಿಂದ ಅದೇ ದಿನ ರಿಮ್ಯಾಂಡ್ ಅರ್ಜಿಯೊಂದಿಗೆ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಲು ಮತ್ತು ನ್ಯಾಯಾಲಯದ ಆದೇಶದಂತೆ ಸಂಬಂಧಪಟ್ಟ ಕಾರಾಗೃಹಕ್ಕೆ ಹಾಜರುಪಡಿಸಲು ಸೂಕ್ತ ಬೆಂಗಾವಲಿನೊಂದಿಗೆ ಕಳುಹಿಸಿಕೊಟ್ಟಿರುತ್ತೇನೆ.

21. ದಿಃ 01.03.2016 ರಂದು ಈ ಪ್ರಕರಣದ ತನಿಖೆಯನ್ನು ಮುಂದುವರೆಸಿ ಹೊನ್ನಾಳಿ ಠಾಣಾ ಪಿಸಿ 92 ಆದ ಚಾಸಾ.19 ರವರು ಹೊನ್ನಾಳಿ ಠಾಣಾ ಮೊಕದ್ದಮೆ ನಂ.278/2015 ರಲ್ಲಿ ವಶಪಡಿಸಿಕೊಂಡಿರುವ ನಮ್ಮ ಮೊಕದ್ದಮೆಗೆ ಸಂಬಂಧಿಸಿದ ವಸ್ತುಗಳನ್ನು ಕೃತ್ಯ ನಡೆದ ಸ್ಥಳದ ಆಧಾರದ ಮೇರೆಗೆ ಕೇಸಿನ ಕಡತವನ್ನು ಹಾಗೂ ಮುದ್ದೆಮಾಲುಗಳನ್ನು ವರದಿಯ ಜೊತೆ ಕಳುಹಿಸಿಕೊಟ್ಟಿದ್ದು, ಪಂಚರಾದ ಚಾಸಾ.17 ಮತ್ತು 18 ರವನ್ನು ಕಚೇರಿಗೆ ಕರೆಸಿ ಅವರ ಸಮಕ್ಷಮ ಚಾಸಾ.19 ರವರು ಹಾಜರುಪಡಿಸಿದ ದಾಖಲಾತಿಗಳು ಮತ್ತು ಮುದ್ದೆಮಾಲುಗಳನ್ನು ಸಂಜೆ 4.30 ರಿಂದ 5.30 ರವರೆಗೆ ಅಮಾನತು ಪಂಚನಾಮೆಯಡಿಯಲ್ಲಿ ವಶ ಪಡಿಸಿ ಕೊಂಡಿರುತ್ತೇನೆ. ನಾನು

ತಯಾರಿಸಿದ ಅಮಾನತು ಪಂಚನಾಮೆಯನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ಗುರುತಿಸಿದ ಪಂಚನಾಮೆಯನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.23 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ.23(ಸಿ) ಎಂದು ಗುರುತಿಸಲಾಯಿತು.

22. ಚಾಸಾ.19 ರವರು ನನ್ನ ಮುಂದೆ ಹಾಜರುಪಡಿಸಿರುವ ವರದಿಯನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ಗುರುತಿಸಿರುವ ವರದಿಯನ್ನು ನಿಪಿ.46 ಎಂದು, ಸಾಕ್ಷಿಯ ಸಹಿಯನ್ನು ನಿಪಿ.46(ಎ) ಎಂದು ಗುರುತಿಸಲಾಯಿತು.ಅ

23. ಚಾಸಾ.19 ರವರು ಹಾಜರುಪಡಿಸಿದ ಪ್ರವವ, ದೂರು, ಅಮಾನತು ಪಂಚನಾಮೆಗಳು, ಮಾಲುಪಟ್ಟಿಗಳು ಹಾಗೂ ಸ್ವಖುಷಿ ಹೇಳಿಕೆಗಳ ದೃಢೀಕೃತ ನಕಲುಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ಗುರುತಿಸಿರುವ ದಾಖಲೆಗಳ ಪೈಕಿ ನಾಲ್ಕು ಅಮಾನತು ಪಂಚನಾಮೆಗಳನ್ನು ನಿಪಿ.18 ರಿಂದ 23 ಎಂದು ಈಗಾಗಲೇ ಗುರುತಿಸಲಾಗಿದ್ದು, ಮಾಲುಪಟ್ಟಿಗಳನ್ನು ನಿಪಿ.35 ರಿಂದ 35 ಎಂದು ಈಗಾಗಲೇ ಗುರುತಿಸಲಾಗಿದ್ದು, ಪ್ರ.ವ.ವ. ಮತ್ತು ದೂರಿನ ದೃಢೀಕೃತ ಪ್ರತಿಯನ್ನು ನಿಪಿ.47 ಮತ್ತು 48 ಎಂದು ಗುರುತಿಸಲಾಯಿತು. ಸ್ವಖುಷಿ ಹೇಳಿಕೆಗಳ ದೃಢೀಕೃತ ಪ್ರತಿಗಳನ್ನು ಈಗಾಗಲೇ ನಿಪಿ.31 ರಿಂದ 34 ಎಂದು ಗುರುತಿಸಲಾಗಿದೆ.

24. ನಾನು ವಶಕ್ಕೆ ಪಡೆದ ಮುದ್ದೆಮಾಲುಗಳಿಗೆ ಸಂಬಂಧಿಸಿದಂತೆ ಮಾಲುಪಟ್ಟಿ ತಯಾರಿಸಿ ನ್ಯಾಯಾಲಯಕ್ಕೆ ನಿವೇದಿಸಿ ಕೊಂಡಿರುತ್ತೇನೆ. ಸದರಿ ಮಾಲುಪಟ್ಟಿಯನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ಗುರುತಿಸಿರುವ ಮಾಲುಪಟ್ಟಿಯನ್ನು ನಿಪಿ.49 ಎಂದು ಸಾಕ್ಷಿಯ ಸಹಿಯನ್ನು ನಿಪಿ.49(ಎ) ಎಂದು

ಗುರುತಿಸಲಾಯಿತು. ಅದೇ ದಿನ ಈ ಪ್ರಕರಣದಲ್ಲಿ ವಶಪಡಿಸಿಕೊಂಡಿರುವ ವಸ್ತುಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಎಫ್.ಎಸ್.ಎಲ್. ಗೆ ಕಳುಹಿಸಿರುತ್ತೇನೆ.

25. ದಿಃ 24.03.2016 ರಂದು ಎಫ್.ಎಸ್.ಎಲ್. ವರದಿ ಬಂದಿದ್ದು ಅದನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಾನು ಸ್ವೀಕರಿಸಿದ ಎಫ್.ಎಸ್.ಎಲ್. ವರದಿಯನ್ನು ನೋಡಿದರೆ ಗುರುತಿಸಬಲ್ಲೆ, ಸಾಕ್ಷಿ ಗುರುತಿಸಿರುವ ಎಫ್.ಎಸ್.ಎಲ್. ವರದಿಯನ್ನು ನಿಪಿ.50 ಎಂದು ಸಾಕ್ಷಿಯ ಸಹಿಯನ್ನು ನಿಪಿ.50(ಎ) ಎಂದು ಗುರುತಿಸಲಾಯಿತು.

26. ನಾನು ವಶಪಡಿಸಿಕೊಂಡಿರುವ ಕತ್ತಿ ಮತ್ತು ಲಾಂಗನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ಗುರುತಿಸಿರುವ ಕತ್ತಿಯನ್ನು ಈಗಾಗಲೇ ಮು.ಮಾ.1 ಎಂದು ಗುರುತಿಸಲಾಗಿದೆ. ಸಾಕ್ಷಿ ಗುರುತಿಸಿದ ಲಾಂಗನ್ನು ಮು.ಮಾ.12 ಎಂದು ಗುರುತಿಸಲಾಯಿತು.

27. ಅದೇ ದಿನ ಚಾಸಾ.1 ರವರು ಕೃತ್ಯ ನಡೆದ ಸ್ಥಳದ ಆರ್.ಟಿ.ಸಿ.ಯನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಾನು ಸ್ವೀಕರಿಸಿದ ಆರ್.ಟಿ.ಸಿ.ಯನ್ನು ನೋಡಿದರೆ ಗುರುತಿಸಬಲ್ಲೆ, ಸಾಕ್ಷಿ ಗುರುತಿಸಿರುವ ಆರ್.ಟಿ.ಸಿ.ಯನ್ನು ನಿಪಿ.51 ಎಂದು ಸಾಕ್ಷಿಯ ಸಹಿಯನ್ನು ನಿಪಿ.51(ಎ) ಎಂದು ಗುರುತಿಸಲಾಯಿತು.

28. ನ್ಯಾಯಾಲಯದ ಆದೇಶದಂತೆ ಈ ಪ್ರಕರಣದಲ್ಲಿ ಅಮಾನತುಪಡಿಸಿಕೊಂಡ ಮಾಲುಗಳನ್ನು ಪಿರ್ಯಾದಿಗೆ ವಾಪಸ್ಸು ನೀಡಿರುತ್ತೇನೆ.

29. ದಿಃ 17.04.2016 ರಂದು ಈ ಪ್ರಕರಣದ 6 ನೇ ಆರೋಪಿ ನಿರೀಕ್ಷಣಾ ಜಾಮೀನು ಪಡೆದುಕೊಂಡು ಬಂದು ನನ್ನ ಮುಂದೆ ಹಾಜರಾಗಿದ್ದು ಆತನನ್ನು ವಿಚಾರಿಸಿ ನ್ಯಾಯಾಲಯದ ಆದೇಶದಂತೆ

ಜಾಮೀನು ಪಡೆದು ಬಿಡುಗಡೆ ಮಾಡಿರುತ್ತೇನೆ. 6 ನೇ ಆರೋಪಿಯು ಕೆಎ-17/ಬಿ-6860 ಮಾರುತಿ ಎರ್ಟಿಗಾ ವಾಹನದ ಮಾಲೀಕರಾಗಿರುತ್ತಾರೆ. ಸದರಿ ವಾಹನವನ್ನು 1 ರಿಂದ 5 ನೇ ಆರೋಪಿತರು ಕೃತ್ಯಕ್ಕೆ ಬಳಸಿದ ಕುರಿತು 6 ನೇ ಆರೋಪಿಯು ನನ್ನ ಮುಂದೆ ಹೇಳಿಕೆ ನೀಡಿರುತ್ತಾರೆ.

30. ದಿಃ 03.05.2016 ರಂದು ಚಾಸಾ.1 ರವರ ಗಾಯದ ಪ್ರಮಾಣಪತ್ರವನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಾನು ಸ್ವೀಕರಿಸಿದ ಗಾಯದ ಪ್ರಮಾಣಪತ್ರವನ್ನು ನೋಡಿದರೆ ಗುರುತಿಸಬಲ್ಲೆ, ಸಾಕ್ಷಿ ಗುರುತಿಸಿರುವ ಗಾಯದ ಪ್ರಮಾಣಪತ್ರವನ್ನು ಈಗಾಗಲೇ ನಿಪಿ.25 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ.25(ಬಿ) ಎಂದು ಗುರುತಿಸಲಾಯಿತು.

31. ಈ ಪ್ರಕರಣದಲ್ಲಿ ಆರೋಪಿತರ ವಿರುದ್ಧ ಸಾಕಷ್ಟು ಸಾಕ್ಷ್ಯಾಧಾರಗಳು ಇದ್ದುದರಿಂದ ದಿಃ 03.05.2016 ರಂದು ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತೇನೆ. ಈ ಪ್ರಕರಣದ ಎಲ್ಲಾ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 1 ರಿಂದ 3, 5 ಮತ್ತು 6 ನೇ ಆರೋಪಿಗಳು ಹಾಗೂ ವಿಸಿ ಮೂಲಕ ಹಾಜರಾಗಿರುವ 4 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

32. ನನಗೆ ವರ್ಗಾವಣೆಯಾಗಿದ್ದರಿಂದ ಈ ಕೇಸಿನ ಕಡತವನ್ನು ಸಿಪಿಐ ಕೊಪ್ಪ ಇವರಿಗೆ ಹಸ್ತಾಂತರಿಸಿರುತ್ತೇನೆ.

<u>ಪಾಟೀಸವಾಲು: ಆರೋಪಿತರ ಪರ ವಕೀಲರಿಂದ</u>

**(**ಈ ಹಂತದಲ್ಲಿ ಆರೋಪಿತರ ಪರ ವಕೀಲರು ಪಾಟೀ ಸವಾಲಿಗಾಗಿ ಸಮಯವಕಾಶ ಕೋರಿದ್ದು**,** ರೂ**.2,300/-** ಖರ್ಚು ಕೊಡಲು ಆದೇಶಿಸಿ ಪಾಟೀ ಸವಾಲಿಗಾಗಿ ಸಮಯವಕಾಶ ನೀಡಲಾಯಿತು**)**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

Sd/-
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ